SRI T.A. Pai, expired on 29th May 1981. He was a member of the Legislative Assembly during period from 1956-57 and elected to Rajya Sabha in April 1972. Sri T.A. Pai served as a Union Minister. He also held many positions in various fields.

I request the Hon. Members to stand in silence for a minute.

(*The House stood in silence for a minute as a mark of respect to the memory of the departed*)

STARRED QUESTIONS
(to which oral answers were given)

Allotment of Sites to Harijans in Raibag Taluk

105 SRI R. S. NADONI (Raibag).—Will the Minister for Housing and Urban Development be pleased to state.—

(a) the number of sites alloted to the Harijans and weaker sections in the Raibag Taluk;

(b) out of the above sites, whether any houses have come up if so, how many;

(c) whether it is a fact that the landlords of Diggewadi, Hidkal Biradi, Kemalapur and Sirgur villages are opposing to construct the houses to Harijans and weaker sections; if so, what action Government is taking against the above landlords;

(d) when will the Government construct houses to Harijans in the above villages ?

SRI DHARMSINGH NARAYAN SINGH (Minister for Housing and Urban Development).—

(a) 2825.

(b) Yes. 1502 houses are completed.

(c) Yes. Land acquisition proceedings have been initiated and action is being taken to finalise them. Writ petitions are filed in the High Court by the landlords.

(d) The Harijan beneficiaries to whom house-sites are allotted should take up constructions of houses under people's Housing Scheme with the loan and subsidy made available to them.

ಶ್ರೀ ಆರ್. ಎಸ್. ನಡೋಣಿ.—ನನ್ನ (ಅ) ಮತ್ತು (ಆ) ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರದಲ್ಲಿ ೨,೮೨೫ ನಿವೇಶನಗಳನ್ನು ಹಂಚಲಾಗಿದೆ ಎಂದೂ ಮತ್ತು ೧,೫೦೨ ಗೃಹಗಳು ಪೂರ್ಣಗೊಂಡಿವೆ ಎಂದು

ಹೇಳಿದ್ದೀರಿ. ಹಾಗಾದರೆ, ಅವು ಯಾವ ಇಸವಿಯಲ್ಲಿ ಮಂಜೂರಾಗಿದ್ದವು ? ಈಗ ಏಕೆ ನಿವೇಶನ ಗಳನ್ನು ತೆಗೆದುಕೊಂಡಿಲ್ಲ ? ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಧರ್ಮಸಿಂಗ್.—ಈಗಾಗಲೇ ೨೮೨೫ ನಿವೇಶನಗಳನ್ನು ಕೊಡಲಾಗಿದೆ; ಅದರಲ್ಲಿ ೧೫೦೨ ಮನೆ ಗಳನ್ನು ಕೂಡ ಕಟ್ಟಲಾಗಿದೆ ಎಂದು ಹೇಳಿದ್ದೇನೆ. ಆ ಪೈಕಿ ಹರಿಜನ-ಗಿರಿಜನರಿಗೆ ಕೊಟ್ಟ ನಿವೇಶನ ಗಳು ೧೧೧೨ ಮತ್ತು ಬೇರೆಯವರಿಗೆ ಕೊಟ್ಟಿರತಕ್ಕದ್ದು ೧೭೧೩. ಇತ್ತೀಚೆಗೆ ಹೆಚ್ಚು ಜನತಾ ಮನೆ ಗಳನ್ನು ಕೂಡ ಆ ಭಾಗದಲ್ಲಿ ಕಟ್ಟಿಸಿ ಕೊಟ್ಟಿದ್ದೇವೆ.

ಶ್ರೀ ವಿ.ವಿ. ಪತ್ತಾರ್.—ನಿವೇಶನಗಳನ್ನು ಕೊಡುವ ಕೆಲಸ ಹಳ್ಳಿಗಳಲ್ಲಿ ನಡೆಯುತ್ತಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಏನಾಗಿದೆ ಎಂದರೆ ಯಾವ ಭೂಮಿಯನ್ನು ಸರ್ಕಾರದವರು ಸ್ವಾಧೀನ ಮಾಡಿ ಕೊಂಡಿದ್ದಾರೆ ಆ ಭೂಮಿಯ ಮಾಲೀಕರುಗಳು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ಆದುದರಿಂದ, ಆ ನಿವೇಶನಗಳನ್ನು ಹಂಚುವ ಕಾರ್ಯ ವಿಳಂಬವಾಗಿದೆ. ಆದಕಾರಣ, ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಹೈಕೋರ್ಟಿನಲ್ಲಿರತಕ್ಕ ವ್ಯಾಜ್ಯಗಳನ್ನು ಬೇಗನೆ ನಿರ್ಣಯ ತೆಗೆದುಕೊಳ್ಳುವಂತೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಎಂದು.

ಶ್ರೀ ಧರ್ಮಸಿಂಗ್.—ಆ ರೀತಿಯಲ್ಲಿ ಯಾರು ಹೈಕೋರ್ಟಿಗೆ ಹೋಗಿದ್ದಾರೆ ಆ ಬಗ್ಗೆ ತೀವ್ರ ಗಮನ ನೀಡಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಹೈಕೋರ್ಟಿನಲ್ಲಿ ಎಷ್ಟು ಕೇಸುಗಳು ಪೆಂಡಿಂಗ್ ಇವೆ ಎಂಬುದನ್ನು ನೋಡಿ ಸರ್ಕಾರದ ಪ್ಲೀಡರ್‌ಗಳಿಗೆ ಕೋರ್ಟಿಗೆ ಅಪಿಯರ್ ಆಗಲಿಕ್ಕೆ ಹೇಳಿದ್ದೇವೆ.

ಶ್ರೀ ಆರ್.ಎಸ್. ನಡೋಣಿ.—ಹಿಡಕಲ್‌ಬಿರಡಿ, ಗ್ರಾಮದವರು ಹೈಕೋರ್ಟಿಗೆ ಹೋಗದಿದ್ದರೂ ಅಲ್ಲಿ ನಿವೇಶನಗಳನ್ನು ಕೊಡದೆ ಇರಲು ಕಾರಣವೇನು ?

ಶ್ರೀ ಧರ್ಮಸಿಂಗ್.—ಹಿಡಕಲ್‌ಬಿರಡಿ, ಕಮಲಾಪುರ ಗ್ರಾಮಗಳವರು ೧೯೭೭ನೇ ಅಕ್ಟೋಬರ್‌ನಲ್ಲಿ ಹೈಕೋರ್ಟಿಗೆ ಹೋಗಲಾಗಿ ಆ ಕೇಸುಗಳು ಇನ್ನೂ ಕೋರ್ಟಿನಲ್ಲಿವೆ, ಕೆಲವು ಡಿವಿಜನಲ್ ಕಮೀಷನರ್ ರವರ ಲೆವಲ್‌ನಲ್ಲಿವೆ.

ಶ್ರೀ ಆರ್. ಎಸ್. ನಡೋಣಿ.— ಹಿಡಕಲ್ ಗ್ರಾಮದವರ್ಯಾರು ಇದುವರೆಗೆ ಹೈಕೋರ್ಟಿಗೆ ಹೋಗಿಲ್ಲ. ಕಳೆದ ೨-೩ ವರ್ಷಗಳಿಂದ ಜನರ ಬೇಡಿಕೆ ಮೇರೆಗೆ ಮಾನ್ಯ ಮಂತ್ರಿಗಳಿಗೆ ಸಾಕಷ್ಟು ಹೇಳಿ ದ್ದೇವೆ. ಆದರೂ ಕೂಡ ಇದುವರೆಗೆ ಅಲ್ಲಿ ನಿವೇಶನಗಳನ್ನು ನೀಡಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಧರ್ಮಸಿಂಗ್.—ಹಿಡಕಲ್ ಗ್ರಾಮದವರು ಹೈಕೋರ್ಟಿಗೆ ಹೋಗಿಲ್ಲವೆಂದೂ ಮತ್ತು ಅಲ್ಲಿ ಜಮೀನನ್ನು ಕೂಡ ಸ್ವಾಧೀನ ಮಾಡಿಕೊಂಡಿಲ್ಲ ಎಂಬ ವಿಚಾರಗಳನ್ನು ಮಾನ್ಯ ಸದ್ಯಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಆದರ ಬಗ್ಗೆ ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿ ಸೂಚನೆ ಕೊಡುತ್ತೇನೆ.

MR. SPEAKER.—I do not know, may be the answer may be slightly incorrect also. For question 'Are you opposing to construct houses to Harijans, and to weaker sections ?' the answer is 'Yes'. Is it a printing mistake ?

SRI A. LAKSHMISAGAR.—That appears to be their real intention.

ಶ್ರೀ ಧರ್ಮಸಿಂಗ್.—ಕನ್‌ಸ್ಟ್ರಕ್ಟ್ ಮಾಡಲಿಕ್ಕೆ ಅಡ್ಡ ಬರುತ್ತಿದ್ದಾರೆಂಬುದಕ್ಕೆ ಈ ಮಾತನ್ನು ಹೇಳಿದ್ದೇನೆ. ಆದರ ಬಗ್ಗೆ ಕೂಡ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಪಿ.ಪಿ. ಹೆಗಡೆ.—ಮಾನ್ಯ ಮಂತ್ರಿಗಳು ಜನತಾ ಮನೆಗಳ ಬಗ್ಗೆ ಹೇಳಿದರು. ಇವರು ಯಾವುದಾದರೂ ಒಂದು ಕೇಸು ಇತ್ಯರ್ಥವಾದದ್ದನ್ನೂ ಹೇಳಲಿಲ್ಲ, ಹೈಕೋರ್ಟಿಗೆ ಹೋದದ್ದು ಅಲ್ಲೇ ಉಳಿಯಿತು. ಇವರು ಮನೆಗಳನ್ನು ಕಟ್ಟುವಾಗ ಉಪಯೋಗಿಸತಕ್ಕ ಸಾಮಾನುಗಳೆಲ್ಲ ಹುಳ ಹಿಡಿದಿರುತ್ತವೆ, ಹೀಗಾಗಿ ಮನೆಗಳೂ ಹೆಚ್ಚು ಕಾಲ ಬಾಳಿಕೆ ಬರುವುದಿಲ್ಲ, ಆದ್ದರಿಂದ, ಕಟ್ಟಿರತಕ್ಕ ಜನತಾ ಮನೆ ಗಳಲ್ಲಿ ಎಷ್ಟು ಬಿದ್ದಿವೆ ಎಂಬುದನ್ನು ಹೇಳುತ್ತಾರೆಯೇ ?

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ.

ಶ್ರೀ ಧರ್ಮಸಿಂಗ್.—ಜನತಾ ಮನೆಗಳನ್ನು ಕಟ್ಟಲಿಕ್ಕೆ ಹೊರಟಾಗ ಎಲ್ಲ ಕಡೆಯಿಂದ ಅನೇಕ ಎಡರು ತೊಡರುಗಳು ಬರುತ್ತವೆ. ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಈಗ ಜಿಲ್ಲಾವಾರು ರೆವ್ಯೂ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಪೆಂಡಿಂಗ್ ಕೇಸುಗಳಿವೆ ಮತ್ತು ಎಲ್ಲೆಲ್ಲಿ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ ಅದನ್ನೆಲ್ಲ ಸರ್ಕಾರ ಗಮನಕ್ಕೆ ತೆಗೆದುಕೊಂಡು ಸ್ಪಿಕ್ಟ್ ಆಗಿ ಇನ್ಸ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ.

Foreign exchange earned by the State Government.

113 SRI P. ANANDAKUNDA HEGDE (Brahmavar).—Will the Chief Minister be pleased to state.—

(a) the number of industries that are exporting industrial products to the Foreign Countries through the Karnataka State Industries ;

(b) the amount of foreign exchange earned by way to exports from these industries ?

SRI R. GUNDU RAO (Chief Minister).—

(a) 512.

(b) The exact statistical figures of Foreign Exchange value earned is not avilable. According to the Indian Currency the total value of exports amounts to Rs, 30,343,17 (in lakhs) for the year 1979–80.

ಶ್ರೀ ಪಿ. ಆನಂದಕುಂದ ಹೆಗ್ಡೆ.—ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಖಚಿತವಾದ ಅಂಕಿ ಅಂಶಗಳು ಸಿಗುವುದಿಲ್ಲವೆಂದು ಮತ್ತು ೩೫ ಕೋಟಿ ರೂ. ನಿರ್ಯಾತವಾಗುತ್ತದೆಂದು ಹೇಳಿದ್ದೀರಿ. ವರ್ಷೇ ವರ್ಷೇ ನಿರ್ಯಾತವನ್ನು ಗುರುತಿಸುವುದಕ್ಕೆ ಖಚಿತವಾದ ಮಾಹಿತಿಯನ್ನು ಪಡೆಯುವ ಅವಶ್ಯಕತೆ ಇಲ್ಲವೆ? ಹಾಗೂ ನಿರ್ಯಾತವನ್ನು ಹೆಚ್ಚಿಸುವ ಬಗ್ಗೆ ರಾಜ್ಯ ಸರ್ಕಾರದ ನಿರ್ದಿಷ್ಟವಾದ ಕಾರ್ಯಕ್ರಮಗಳೇನು ಇವೆ ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—೩೫ ಸಾವಿರ ಕೋಟಿ ಅಲ್ಲ, ೩೦೫ ಕೋಟಿ ಎಂದು ತಿದ್ದಬೇಕಾಗಿದೆ. ಏಕೆಂದರೆ, ಎಲ್ಲೋ ಮುದ್ರಣ ದೋಷವಾಗಿದೆ.

ಶ್ರೀ ಪಿ. ಆನಂದಕುಂದ ಹೆಗ್ಡೆ.—ನಿರ್ಯಾತವನ್ನು ಹೆಚ್ಚಿಸುವ ಅವಶ್ಯಕತೆ ಇದೆಯಲ್ಲವೆ ?

ಶ್ರೀ ಆರ್. ಗುಂಡೂರಾವ್.—ಖಂಡಿತ ಇದೆ.

ಶ್ರೀ ಪಿ. ಆನಂದಕುಂದ ಹೆಗ್ಡೆ.—ರಾಜ್ಯದ ಉತ್ಪಾದನೆಯನ್ನು ವಿದೇಶಗಳಿಗೆ ನಿರ್ಯಾತ ಮಾಡುವುದಕ್ಕೆ ರಾಜ್ಯ ಮಟ್ಟದ ಯೋಜನೆ ಇದೆಯೆ ?

ಶ್ರೀ ಆರ್. ಗುಂಡೂರಾವ್.—ಅದನ್ನು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಮಾಡಬೇಕಾಗುತ್ತದೆ. ವಿದೇಶಗಳಿಗೆ ರಫ್ತು ಮಾಡತಕ್ಕದ್ದನ್ನು ಕೇಂದ್ರದ ಅನುಮತಿಗೆ ಒಳಪಟ್ಟು ಮಾಡಬೇಕಾಗುತ್ತದೆ.

ಶ್ರೀ ಪಿ. ಆನಂದಕುಂದ ಹೆಗ್ಡೆ.—ಖಚಿತವಾದ ಅಂಕಿ ಸಂಖ್ಯೆಗಳನ್ನು ಗುರುತಿಸಲು ಏನು ತೊಂದರೆ ಇದೆ ? ಮತ್ತು ಯಾವ ಕಾರಣಕ್ಕಾಗಿ ಇದು ಕಡಿಮೆಯಾಗುತ್ತದೆ ಎಂಬುದಕ್ಕೆ ಖಚಿತವಾದ ಅಂಕಿ ಅಂಶಗಳು ಬೇಕಾಗುತ್ತದೆ. ಆದ್ದರಿಂದ, ಇದನ್ನು ಸರ್ಕಾರ ಗಮನಿಸುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.